ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 26–12–2019

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಯಕ್ಷವಾಹಿನಿ (ರಿ) ಬೆಂಗಳೂರು ಇವರ ಸಹಯೋಗದೊಂದಿಗೆ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ "ಲೋಕಾರ್ಪಣೆ ಸಮಾರಂಭ" ಹಾಗೂ ಯಕ್ಷರೂಪಕ–ಪಂಚ ಪಾವನ ಕಥಾ.

<u>ಲೋಕಾರ್ಪಣೆ:</u>

ಸಿ.ಟಿ. ರವಿ,
ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಕ್ಕರೆ ಖಾತೆ, ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು.

<u>ಮುಖ್ಯ ಅತಿಥಿಗಳು:</u>

ಬೇಳೂರು ಸುದರ್ಶನ,
ಮುಖ್ಯಮಂತ್ರಿಯವರ ಸಲಹೆಗಾರರು (ಇ–ಆಡಳಿತ) ಬೆಂಗಳೂರು.

ರವೀಂದ್ರ ಭಟ್ ಐನಕ್ಕೈ,
ಕಾರ್ಯನಿರ್ವಾಹಕ ಸಂಪಾದಕರು,
ಪ್ರಜಾವಾಣಿ, ಬೆಂಗಳೂರು.

ಡಾ. ಆನಂದರಾಮ ಉಪಾಧ್ಯ,
ಅಧ್ಯಕ್ಷರು,
ಯಕ್ಷವಾಹಿನಿ (ರಿ), ಬೆಂಗಳೂರು.

ದಿನಾಂಕ: 27–12–2019 ಶುಕ್ರವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ.

ಸ್ಥಳ: ನಯನ ರಂಗಮಂದಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

2. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ 28ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್ ಹೆಸರಿನಲ್ಲಿ ಬೃಹತ್ ಮಕ್ಕಳ ಸಮಾವೇಶ

<u>ಉದ್ಘಾಟನೆ:</u>

ಬಿ.ಎಸ್. ಯಡಿಯೂಪ್ಪ,
ಮುಖ್ಯ ಮಂತ್ರಿಗಳು ಹಾಗೂ
ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,

ಘನ ಉಪಸ್ಥಿತಿ:
ಡಾ. ಸಿ.ಎನ್. ಅಶ್ವಥನಾರಾಯಣ,
ಉಪ ಮುಖ್ಯಮಂತ್ರಿಗಳು ಹಾಗೂ
ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್,

ಆರ್. ಅಶೋಕ್,
ಕಂದಾಯ ಮತ್ತು ಪೌರಾಡಳಿತ ಸಚಿವರು ಹಾಗೂ
ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು

<u>ಅಧ್ಯಕ್ಷತೆ:</u>
ಟಿ. ವೆಂಕಟರಮಣಯ್ಯ,
ಶಾಸಕರು,
ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದಿನಾಂಕ: 27–12–2019 ಶುಕ್ರವಾರ, ಸಮಯ: ಮಧ್ಯಾಹ್ನ 3.00 ಗಂಟೆಗೆ.

ಸ್ಥಳ: ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

3. ಸ್ಥಳೀಯ ಪ್ರತಿಭಾ ಪ್ರದರ್ಶನ ಮತ್ತು ಹಿರಿಯರಾದ ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪನವರಿಗೆ ಸನ್ಮಾನ ಕಾರ್ಯಕ್ರಮ:

ಉದ್ಘಾಟನೆ:

ಕೆ. ಪ್ರತಾಪಚಂದ್ರ ಶೆಟ್ಟಿ,
ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್,

ಅಧ್ಯಕ್ಷತೆ:

ಎಸ್.ಆರ್. ಪಾಟೀಲ್,
ವಿರೋಧ ಪಕ್ಷದ ನಾಯಕರು,
ಕರ್ನಾಟಕ ವಿಧಾನ ಪರಿಷತ್

ದಿನಾಂಕ: 27-12-2019 ಶುಕ್ರವಾರ, ಸಮಯ: ರಾತ್ರಿ 8.00 ಗಂಟೆಗೆ.
ಸ್ಥಳ: ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

## ಪತ್ರಿಕಾ ಪ್ರಕಟಣೆ

# ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ

ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ)

ಮಾರ್ಚ್/ಏಪ್ರಿಲ್ -2020 ರ ದಿನಾಂಕ: 27-03-2020 ರಿಂದ 09-04-2020 ರವರೆಗೆ ವಿದ್ಯಾರ್ಥಿಗಳಿಗೆ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್) ಮುಖ್ಯ ಪರೀಕ್ಷೆಗೆ ಆಯಾ ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್.) ಕಲಿಕಾ ಕೇಂದ್ರಗಳಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸಲು ದಿನಾಂಕ: 31-12-2019 ಕಡೆಯ ದಿನಾಂಕವಾಗಿರುತ್ತದೆ ಎಂಬುದಾಗಿ ವಿದ್ಯಾರ್ಥಿಗಳ ಪೋಷಕರೆ ಮತ್ತು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದಿನಾಂಕ: 02-01-2020 ರೊಳಗೆ ನಿಗಧಿತ ಶುಲ್ಕ ಪಾವತಿಸುವಂತೆ ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# <u>Last Date for fess collection</u>

**<u>Bengaluru, December 26 (Karnataka Information)</u>**

**June – 2016 Karnataka Open School (K.O.S) Main Examination for fresh candidate, scheduled is 31.12.2019. Students, Parents and public are here by informed that examination fee will be payable on or before 31.12.2019 in respective concerned K.O.S. Study Centers. Fee to be payable by concern KOS Coordinators on or before 02-01-2020. Announcement given by Director (Other Exams), Karnataka Secondary Education Examination Board, Bangalore.**

## “ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣಗಳ ‘ಲೋಕಾರ್ಪಣೆ ಸಮಾರಂಭ’

**ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ)**

ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಯಕ್ಷವಾಹಿನಿ(ರಿ), ಬೆಂಗಳೂರು ಇವರ ಸಹಯೋಗದೊಂದಿಗೆ “ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣಗಳ ‘ಲೋಕಾರ್ಪಣೆ ಸಮಾರಂಭ’ ಹಾಗೂ ಯಕ್ಷರೂಪಕ–ಪಂಚ ಪಾವನ ಕಥಾ” ಸಮಾರಂಭವನ್ನು ಡಿಸೆಂಬರ್ 27ರಂದು ಬೆಳಿಗ್ಗೆ:10.00 ಗಂಟೆಗೆ ನಯನ ರಂಗಮಂದಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಕ್ಕರೆ ಖಾತೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಟಿ. ರವಿ ಅವರು ನೆರವೇರಿಸಲಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಪ್ರೊ .ಎಂ.ಎ. ಹೆಗಡೆ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೇಳೂರು ಸುದರ್ಶನ, ಮಾನ್ಯ ಮುಖ್ಯಮಂತ್ರಿಯವರ ಸಲಹೆಗಾರರು(ಇ–ಆಡಳಿತ), ರವೀಂದ್ರ ಭಟ್ ಐನಕೈ, ಕಾರ್ಯನಿರ್ವಾಹಕ ಸಂಪಾದಕರು, ಪ್ರಜಾವಾಣಿ, ಎಸ್.ರಂಗಪ್ಪ.ಎಫ್.ಸಿ.ಎ, ಕ.ಆ.ಸೇ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಡಾ. ಆನಂದರಾಮ ಉಪಾಧ್ಯ, ಅಧ್ಯಕ್ಷರು, ಯಕ್ಷವಾಹಿನಿ(ರಿ) ಇವರುಗಳು ಆಗಮಿಸಲಿದ್ದಾರೆ. ಯಕ್ಷರೂಪಕ–“ಪಂಚ ವಾವನ ಕಥಾ” ವಿಶ್ವಶಾಂತಿ ಪ್ರತಿಷ್ಠಾನ(ರಿ), ಶಿರಸಿ ಕು.ತುಳಸಿ ಹೆಗಡೆ ಇವರು ಪ್ರಸ್ತುತ ಪಡಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ಅವರು ಡಿಸೆಂಬರ್ 27 ರಿಂದ 29 ರವರೆಗೆ ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 29 ರಂದು ಸಂಜೆ ಕೇಂದ್ರಸ್ಥಾನಕ್ಕೆ ಹಿಂತಿರುಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಮೂಲ ದಾಖಲೆ ಪರಿಶೀಲನೆ

**ಬೆಂಗಳೂರು, ಡಿಸೆಂಬರ್ 26 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗ ಅಧಿಸೂಚಿಸಿದ್ದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರು (ಡಿಪ್ಲೋಮಾ) 182+48 (ಹೈ.ಕ) ಹುದ್ದೆಗಳಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು **http://kpsc.kar.nic.in** ರಲ್ಲಿ ಪ್ರಕಟಿಸಿದೆ. ದಾಖಲಾತಿಗಳ ಪರಿಶೀಲನಾ ಕಾರ್ಯವನ್ನು 06-1-2020 ರಿಂದ 9-01-2020 ರವರೆಗೆ ನಿಗದಿಪಡಿಸಲಾಗಿದೆ. ಅರ್ಹ ಅಭ್ಯರ್ಥಿಗಳಿಗೆ ಈಗಾಗಲೇ ಅಂಚೆ ಮೂಲಕ ಸೂಚನಾ ಪತ್ರಗಳನ್ನು ರವಾನಿಸಲಾಗಿದೆ. ಅಭ್ಯರ್ಥಿಗಳಿಗೆ ಸೂಚನಾ ಪತ್ರ ತಲುಪದೇ ಇದ್ದವರು ಅರ್ಹತಾ ಪಟ್ಟಿಯನ್ನು ಪಡೆದು ನಿಗದಿತ ದಿನಾಂಕದಂದು ಆಯೋಗದ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ಹಾಜರಾಗಲು ಪ್ರಕಟಣೆ ತಿಳಿಸಿದೆ.